


International Journal of Kannada Research
www.kannadajournal.com

ISSN: 2454–5813
IJKR 2020; 6(1): 150-152
© 2020 IJKR
www.kannadajournal.com
Received: 13-11-2019
Accepted: 15-12-2019

**ಶ್ರೀರಾಮ .ಎಂ**
ಸಹಾಯಕ
ಪ್ರಾಧ್ಯಾಪಕರು,
ಬಿ.ಬಿ.ಎಂ. ವಿಭಾಗ,
ನ್ಯೂ ಹಾರಿಜನ್ ಕಾಲೇಜು,
ಮಾರತ್ತಹಳ್ಳಿ ರಿಂಗ್,
ಬೆಂಗಳೂರು

Corresponding Author:
**ಶ್ರೀರಾಮ .ಎಂ**
ಸಹಾಯಕ
ಪ್ರಾಧ್ಯಾಪಕರು,
ಬಿ.ಬಿ.ಎಂ. ವಿಭಾಗ,
ನ್ಯೂ ಹಾರಿಜನ್ ಕಾಲೇಜು,
ಮಾರತ್ತಹಳ್ಳಿ ರಿಂಗ್,
ಬೆಂಗಳೂರು

# ಬೆಸಗರಹಳ್ಳಿ ರಾಮಣ್ಣನವರ "ತಾಯಿ" ಕಥೆಯಲ್ಲಿ ಕಾಣುವ ಉರುಗಮ್ಮನ

**ಶ್ರೀರಾಮ .ಎಂ**

ಡಾ|| ಬೆಸಗರಹಳ್ಳಿ ರಾಮಣ್ಣನವರು ರಚಿಸಿರುವ 'ತಾಯಿ' ಒಂದು ಅತ್ಯಂತ ರಸವತ್ತಾದ, ಪ್ರಭಾವಕಾರಿಯಾದ ಸಣ್ಣಕಥೆಯಾಗಿದೆ. ಮಾತೃಶಕ್ತಿಯ ಪ್ರಭಾವ ಎಂತಹುದೆಂಬುದನ್ನು ಮನವರಿಕೆ ಮಾಡಿಕೊಡುವ ಕಥೆ ಇದು. ಭಾ ರತೀಯರು ಮೊದಲಿನಿಂದಲೂ ಧರ್ಮಭೀರುಗಳಾಗಿದ್ದರು. ಅನ್ಯಾಯವನ್ನು ಹಿಂದಿನ ಕಾಲದಲ್ಲಿ ಜನ ಮಾಡುತ್ತಿ ರಿಲಿಲ್ಲ. ಆದರೆ, ಕಾಲ ಬದಲಾದಂತೆ ಲಂಚ ತಿಂದು ಅನ್ಯಾಯ ಮಾಡುವ ಜನರ ಸಂಖ್ಯೆ ಹೆಚ್ಚಾಗುತ್ತಿದೆ ಎಂಬು ದಕ್ಕೆ ದಿನಪತ್ರಿಕೆಗಳ ವರದಿ ದೊಡ್ಡ ಸಾಕ್ಷಿಯಾಗಿದೆ. ಲಂಚ ತಿಂದು ರೆಕಾರ್ಡುಗಳನ್ನು ತಿದ್ದುತ್ತಿದ್ದ ಪುಟ್ಟರಾಜನನ್ನು ಅವನ ತಾಯಿಯು ತಿದ್ದಿದ ಚಿತ್ರಣ ಇಲ್ಲಿದೆ. ಸರ್ಕಾರ 'ಉಳುವವನಿಗೆ ಭೂಮಿ'ಎಂಬ ಕಾನೂನನ್ನು ಜಾರಿಗೆ ತಂದ ದ್ದು ಬಡವರ ಉದ್ದಾರಕ್ಕಾಗಿ; ಆದರೆ ಹಳ್ಳಿಗಳಲ್ಲಿದ್ದ ಪುಡಾರಿಗಳು ಲಂಚ ತಿನ್ನಿಸಿ ಉಳುವವನ ವಿರುದ್ಧ ಸಾಕ್ಷಿ ಹೇಳಿ ಸಿ ನೂರಾರು ಎಕರೆ ಭೂಮಿಯನ್ನು ದಕ್ಕಿಸಿಕೊಂಡಿದ್ದು ವಾಸ್ತವ ಸಂಗತಿ. ಇಂತಹ ಪ್ರಕರಣಕ್ಕೆ ಸೆಟ್ಟಿಯೊಬ್ಬ ಕೈ ಹಾಕಿದಾಗ, ಗುಮಾಸ್ತ, ವಿಲೇಜ್ ಅಕೌಂಟೆಂಟರೇ ಮೊದಲಾದವರು ಹಣ ತಿಂದು ಇದಕ್ಕೆ ಷಾಮೀಲಾದಾಗ ಗು ಮಾಸ್ತ ಪುಟ್ಟರಾಜನ ತಾಯಿ ಉರಗವ್ವ ಬಹಿರಂಗವಾಗಿ ತನ್ನ ಮಗ ಮಾಡಿರುವ ಹಲಕಾ ಕೆಲಸವನ್ನು ಪ್ರಕಟಿಸಿ- ನಿಜವನ್ನು ಹೊರಹಾಕಿ ಚನ್ನಮ್ಮನಿಗೆ ನ್ಯಾಯ ದೊರಕಿಸಿಕೊಟ್ಟದ್ದೇ ಈ ಕಥೆಯ ವಸ್ತುವಾಗಿದೆ. ಅಸಿಸ್ಟೆಂಟ್ ಕಮೀ ಷನರ್ ಅವರು ನ್ಯಾಯದ ಪರವಾಗಿದ್ದರೆಂಬುದನ್ನು ನಾವು ಮರೆಯುವಂತಿಲ್ಲ.

ಉರಗಮ್ಮನು ತನ್ನ ಮಗನಾದ ಪುಟ್ಟರಾಜನನ್ನು ತುಂಬ ಪ್ರೀತಿಯಿಂದ ಬೆಳೆಸಿದ್ದಳು. ಉರುಗಮ್ಮ ಗಂಡನನ್ನು ಕಳೆದುಕೊಂಡ ಮೇಲೆ ಕೂಲಿನಾಲಿ ಮಾಡಿ ಮಗನನ್ನು ಓದಿಸಿದಳು. ಪುಟ್ಟರಾಜನಿಗೆ ವಿಲೇಜ್ ಪಂಚಾಯ್ತಿ ಕಛೇರಿ ಯಲ್ಲಿ ಸರ್ಕಾರಿ ಉದ್ಯೋಗ ಲಭಿಸಿತು. ಸರ್ಕಾರಿ ನೌಕರನಾಗಿ ಪುಟ್ಟರಾಜ ನಿಯತ್ತಿನಿಂದಿರಲಿಲ್ಲ. ಲಂಚ ತಿಂದು ರೆಕಾರ್ಡುಗಳನ್ನು ತಿದ್ದಿ ಬಡವರ ಮನೆಗಳನ್ನು ನಾಶ ಮಾಡಿ ಸಿರಿವಂತನಾಗಲಾರಂಭಿಸಿದನು. ಅವನ ವಹಿವಾಟ ನ್ನು ಕಂಡ ತಾಯಿ ಉರಗಮ್ಮನಿಗೆ ಮಗ ನ್ಯಾಯದ ದಾರಿಯಲ್ಲಿಲ್ಲವೆನಿಸಿತು. ಆಕೆ ಸತ್ಯ, ನ್ಯಾಯ, ಪ್ರಾಮಾಣಿಕವಾ ಗಿ ಬದುಕದಿದ್ದರೆ ದೇವರು ಶಿಕ್ಷಿಸದಿರುವುದಿಲ್ಲವೆಂದು ಬೋಧಿಸಿದ್ದು ಅವನ ತಲೆಗೆ ಹೋಗಲಿಲ್ಲ. ಉರುಗಮ್ಮನಿಗೆ ಕ್ಯಾ ನ್ಸರ್ ರೋಗ ಬಂದು ಹೊಟ್ಟೆಯಿಂದ ನೆತ್ತಿಯವರೆಗೆ ನೋವನ್ನನುಭವಿಸುವ ಸ್ಥಿತಿ ಬಂದಾಗ, ಮಗನಾದ ಪುಟ್ಟರಾಜ ಅನ್ಯಾಯದಿಂದ ಸಂಪಾದಿಸಿದ ಹಣದಿಂದ ತನ್ನನ್ನು ಸಾಕಿದ್ದರಿಂದಲೇ ಕ್ಯಾನ್ಸರ್ ಬಂದಿತೆಂದು ಉರುಗಮ್ಮ ಭಾವಿ ಸಿದಳು. ಆ ಸಂದರ್ಭದಲ್ಲಿ ಚನ್ನಮ್ಮನ ಆರೂವರೆ ಎಕರೆ ಗದ್ದೆಯನ್ನು ಸೆಟ್ಟಿಯು ಕಬಳಿಸುತ್ತಿರುವ ಸಂಗತಿ ಹಳ್ಳಿಯಲ್ಲಿ ಹಬ್ಬಿತು. ಸೆಟ್ಟಿ ಕೊಟ್ಟ ಲಂಚವನ್ನು ಸ್ವೀಕರಿಸಿದ್ದ ಪುಟ್ಟರಾಜ ಸೆಟ್ಟಿಯ ಪರವಾಗಿ ಪಾಣಿ ಬರೆದಿರುವನೆಂಬ ಸುದ್ದಿಯೂ ಬಂದಿತು.

ಮಗನಾದ ಪುಟ್ಟರಾಜನನ್ನು ಕರೆದು ಚನ್ನಮ್ಮನ ಸಂಸಾರವನ್ನು ಹಾಳು ಮಾಡಬಾರದೆಂದೂ, ಸುಳ್ಳು ರೆಕಾರ್ಡು ಬರೆ ದವನ ಕೈಗೆ ಕುಷ್ಠರೋಗ ಬಡಿದುಕೊಳ್ಳುವುದಾಗಿಯೂ, ತಾನು ಹೊಟ್ಟೆ-ಬಟ್ಟೆ ಕಟ್ಟಿ ಓದಿಸಿದ್ದು ನಾಲ್ಕು

ಜನಕ್ಕೆ ಉಪಕಾ ರ ಮಾಡಲೆಂದೇ ವಿನಾ ಜನರಿಗೆ ಮೋಸ ಮಾಡಿ ಪಾಪಿಷ್ಠನಾಗಲೆಂದಲ್ಲವೆಂದು ಉರಗಮ್ಮ ಹೇಳಿದಳು. ಆದರೆ ಪುಟ್ಟ ರಾಜ ತಾನು ಸರ್ಕಾರದ ಕಾನೂನಿನ ಪ್ರಕಾರ ಕೆಲಸ ಮಾಡುವುದಾಗಿಯೂ, ತನ್ನ ಉದ್ಯೋಗ ವಿಚಾರಕ್ಕೆ ತಲೆ ಹಾಕ ಬಾರದೆಂದೂ ಬೈದನು. ಪಕ್ಕದ ಮನೆಯ ಬೋರಮ್ಮ ಬಂದು ಈ ವಿಷಯಗಳನ್ನು ತಿಳಿಸಿರುವಳೆಂದು ತಿಳಿದ ಸೊಸೆ ಯಶೋದಮ್ಮ ಇನ್ನು ಮುಂದೆ ಅವಳನ್ನು ಮನೆಗೆ ಸೇರಿಸಬಾರದೆಂದು ಅತ್ತೆಯಾದ ಉರುಗಮ್ಮನಿಗೆ ಹೇಳಿದಳು. ಉ ರುಗಮ್ಮನಿಗೆ ತನ್ನ ಮಗ ಕರ್ಣನಂತೆ, ಹರಿಶ್ಚಂದ್ರನಂತೆ ಬದುಕಲೆಂದು ಆಸೆ ಇತ್ತು. ಬೋರಮ್ಮ ಉರುಗಮ್ಮನನ್ನು ಭೇಟಿ ಮಾಡಿದಾಗ ಪುಟ್ಟರಾಜ ಪಾಣಿ ಬರೆದುಬಿಟ್ಟರೆ ಚನ್ನನ್ನನ ಜೀವನ ಹಾಳಾದಂತೆ ಎಂದು ಹೇಳಿ, ಚೆನ್ನಮ್ಮನಿಗೆ ಅವಳ ಭೂಮಿ ಅವಳಿಗೆ ದಕ್ಕುವಂತೆ ಮಾಡಬೇಕೆಂದು ಹೇಳಿದ್ದಳು.

ಈ ಕಡೆಗೆ ಚನ್ನಮ್ಮನಿಗೆ ಎಲ್ಲವೂ ತನ್ನ ಹಕ್ಕಿನ ವಿರುದ್ಧ ಆಗುತ್ತಿದೆ ಎಂದು ತಿಳಿದಾಗ ಅವಳು ಹಲವರನ್ನು ಹಿಡಿದು ತ ನಗಾಗುತ್ತಿರುವ ಅನ್ಯಾಯದ ಬಗ್ಗೆ ವಿವರಿಸಿ ಹಲವರಿಂದ ಪತ್ರಗಳನ್ನು ಅಸಿಸ್ಟೆಂಟ್ ಕಮಿಷನರ್, ತಹಸೀಲ್ದಾರ್ ಅವ ರಿಗೆ ಬರೆಸಿದಳು. ಆಗ ಕೃಷ್ಣಕುಮಾರ್ ಎಂಬುವವರು ಅಸಿಸ್ಟೆಂಟ್ ಕಮಿಷನರ್ ಆಗಿದ್ದರು. ಅವರು ದಕ್ಷರೂ, ಪ್ರಾಮಾ ಣಿಕರೂ ಆಗಿದ್ದರು. ದೂರಿನ ಕಂತೆಯೇ ಬಂದಾಗ ಚನ್ನಮ್ಮನ ಭೂವಿವಾದವನ್ನು ಬಹಳ ಎಚ್ಚರಿಕೆಯಿಂದ ನಿರ್ವಹಿಸ ಬೇಕೆಂದು ಅವರು ತೀರ್ಮಾನಿಸಿದರು. ತಹಶೀಲ್ದಾರರಿಗೂ ಚನ್ನಮ್ಮನ ಪರ ಅರ್ಜಿಗಳು ಬಂದಾಗ ಅವರು ನ್ಯಾಯ ಮಂಡಲಿಯಲ್ಲಿ ತೀರ್ಮಾನವಾಗಲೆಂದು ಸುಮ್ಮನಿದ್ದರು. ಚನ್ನಮ್ಮ ಒಂದು ದಿನ ಹಿರಿಯ ಮಗನನ್ನು ಕರೆದುಕೊಂಡು ಶ್ರೀರಂಗಪುರಕ್ಕೆ ಹೋಗಿ ಎ.ಸಿ.ಯವರನ್ನು ನೋಡಿ ಅವರ ಪಾದಗಳ ಮೇಲೆ ಬಿದ್ದು ತನಗೆ ಸೆಟ್ಟಿ ಮಾಡಬೇಕೆಂದಿರುವ ಅನ್ಯಾಯವೇನೆಂಬುದನ್ನು ತಿಳಿಸಿ ತನ್ನ ಸಂಸಾರವನ್ನು ಕಾಪಾಡಬೇಕೆಂದು ಕೇಳಿಕೊಂಡಳು. ಎ.ಸಿ. ಸಾಹೇಬರು ಸ ತ್ಯವಾಗಲೂ ಅನ್ಯಾಯವಾಗದಂತೆ ನೋಡಿಕೊಳ್ಳುವುದಾಗಿ ಹೇಳಿದರು.

ಮುದಿಯೂರಿನಲ್ಲಿ ಶನಿವಾರ ಸಂತೆ ನಡೆಯಲಿತ್ತು. ಆ ದಿನವೇ ಭೂನ್ಯಾಯ ಮಂಡಲಿ ಸಭೆ ಇತ್ತು. ಚನ್ನಮ್ಮ ಚಂದ್ರ ಸೆಟ್ಟಿಯರ ಭೂವಿವಾದವನ್ನೇ ಮೊದಲಿಗೆ ತೆಗೆದುಕೊಳ್ಳಲಾಯಿತು. ಎ.ಸಿ. ಕೃಷ್ಣಕುಮಾರ್ ಅಧ್ಯಕ್ಷತೆ ವಹಿಸಿದ್ದರು. ಚನ್ನ ಮ್ಮನ ಕಡೆಯವರು ಚಂದ್ರ ಸೆಟ್ಟಿಯಿಂದ ತಮಗಾಗುತ್ತಿರುವ ಅನ್ಯಾಯವನ್ನು ವಿವರಿಸಿದರು. ಚನ್ನಮ್ಮ ವಿಧವೆ, ಬಡವಿ, ಯಾರೂ ಇಲ್ಲ ಎಂದು ಚಂದ್ರ ಸೆಟ್ಟಿ ಹಣ ಕೊಟ್ಟು ಎಲ್ಲರನ್ನೂ ಬುಟ್ಟಿಗೆ ಹಾಕಿಕೊಂಡು ಮಸಲತ್ತು ನಡೆಸಿರುವುದಾಗಿ ಹೇಳಿದರು. ತಹಶೀಲ್ದಾರರು ತಮಗೆ ಬಂದಿರುವ ಮನವಿ ಪತ್ರಗಳನ್ನು ನ್ಯಾಯ ಮಂಡಲಿಯ ಮುಂದೆ ಮಂಡಿಸಿದರು.ಎ.ಸಿ ಯವರು ತಮಗೆ ಡಿ.ಸಿ.ಯವರಿಂದ ಬಂದ ಮನವಿ ಪತ್ರಗಳನ್ನು ಸಭೆಯಲ್ಲಿ ಮಂಡಿಸಿದರು. ಈ ಎಲ್ಲ ಪತ್ರಗಳನ್ನು ಪರಿ ಶೀಲಿಸಿದಾಗ ಭೂಮಿ ಇರುವ ಜಾಗಕ್ಕೆ ಖುದ್ದಾಗಿ ಹೋಗಿ ಎಲ್ಲ ವಿವರಗಳನ್ನು ಪರಿಶೀಲಿಸಿ ನ್ಯಾಯ ತೀರ್ಮಾನ ಮಾಡು ವುದು ಸರಿ ಎಂದು ಅಸಿಸ್ಟೆಂಟ್ ಕಮೀಷನರ್ ತೀರ್ಮಾನಿಸಿದರು. ಆದರೆ ದುಡ್ಡು ತಿಂದವರು. ಅದೇ ದಿನ ಅಲ್ಲಿಯೇ ಮಾರನೆಯ ದಿನವನ್ನೇ ಚನ್ನಮ್ಮನ ಭೂಮಿಯ ಪರಿಶೀಲನೆಗೆ ಕಾರ್ಯಕ್ರಮವನ್ನು ಎ.ಸಿ.ಸಾಹೇಬರು ಗೊತ್ತು ಮಾಡಿಬಿ ಟ್ಟರು.

ಊರಿನ ಜನರೆಲ್ಲ ದುಡ್ಡು ತಿಂದವರಿಗೆ ಎ.ಸಿ.ಸಾಹೇಬರು ಪಾಠ ಕಲಿಸುವರೆಂದು ಮಾತಾಡಿಕೊಳ್ಳಲಾರಂಭಿಸಿದರು.

ಪುಟ್ಟರಾಜನಿಗೆ ನಿದ್ರೆ ಬರಲಿಲ್ಲ. ತಾನು ಬರೆದಿರುವ ಸುಳ್ಳುಗಳು ಎಲ್ಲಿ ಪ್ರಕಟವಾಗುದೋ ಎಂದು ಹೆದರಿದನು. ಸಾ ಹೇಬರುಪರಿಶೀಲನೆಗೆ ಬರುವ ಹಿಂದಿನ ದಿನ ಉರುಗಮ್ಮ ಅಪಾರ ಯಾತನೆಯನ್ನನುಭವಿಸಿದಳು. ಬೇಗ ತನಗೆ ಸಾ ವು ಬರಲೆಂದು ಹಾರೈಸುತ್ತಿದ್ದಳು. ತನಗೆ ವಿಷ ಕೊಡಬೇಕೆಂದು ಸೊಸೆಯನ್ನು ಕೇಳಿದಳು. ಉರುಗಮ್ಮನಿಗೆ ಮಾರನೆ ಯ ದಿನ ಎ.ಸಿ.ಸಾಹೇಬರು ನ್ಯಾಯತೀರ್ಮಾನಕ್ಕೆ ಬರುವ ಚಿಚಾರ ತಿಳಿದಿತ್ತು. ಅವಳು ದೇವರನ್ನು ಒಂದೇ ಸಮನೆ 'ಚನ್ನವ್ವನಿಗೆ ನ್ಯಾಯಸಿಗಲಿ, ಮಗ ಬರೆದಿರುವ ಸುಳ್ಳು ವಿಚಾರ ಬಹಿರಂಗವಾಗಲಿ' ಎಂದು ಪ್ರಾರ್ಥಿಸಿದಳು. ಮಾರನೆ ಯ ದಿನ ಊರಿನಲ್ಲಿ ಎಲ್ಲರೂ ಚನ್ನಮ್ಮನಿಗೆ ನ್ಯಾಯ ದೊರಕುವುದೊ? ಚಂದ್ರಸೆಟ್ಟಿಗೆ ಭೂಮಿ ದಕ್ಕುವುದೊ? ಎಂಬ ವಿ ಚಾರವನ್ನೇ ಚರ್ಚಿಸುತ್ತಿದ್ದರು.ಎ.ಸಿ.ಸಾಹೇಬರು ಇತರ ಅಧಿಕಾರಿಗಳೊಡನೆ ಊರಿಗೆ ಬಂದಾಗ ಊರಿನ ಪ್ರಮುಖರು ತಂದ ಹೂಹಾರ, ನಿಂಬೆ ಹಣ್ಣುಗಳನ್ನು ಸ್ವೀಕರಿಸದೆ ನೇರವಾಗಿ ವಿವಾದಗ್ರಸ್ತ ಭೂಮಿಗೆ ಹೋದರು. ಚನ್ನಮ್ಮನ ಭೂ ಮಿಯ ನೆರೆಹೊರೆಯ ಭೂಮಿಯುಯಜಮಾನರಾದ ಕೆಂಪಲಿಂಗೇಗೌಡ ಮತ್ತು ಅಬ್ದುಲ್ ವಹಾಬ್ ಅವರನ್ನು ಕರೆಸಲಾ ಯಿತು. ಅವರಿಬ್ಬರಿಂದ ಸತ್ಯವನ್ನೇಹೇಳುವುದಾಗಿ ಪ್ರಮಾಣ ಮಾಡಿಸಿ ಅವರಿಬ್ಬರ ಜಮೀನಿನ ನಡುವೆ ಇರುವ ಭೂಮಿ ಯನ್ನು ಯಾರು ವ್ಯವಸಾಯ ಮಾಡುತ್ತಿರುವರೆಂದು ಪ್ರಶ್ನಿಸಿದರು. ಇವರಿಬ್ಬರೂ ಹಣ ತಿಂದ ನಿಮಿತ್ತ ಅವರು ಚಂದ್ರ ಸೆಟ್ಟಿಯೇ

ವ್ಯವಸಾಯ ಮಾಡುತ್ತಿರುವುದಾಗಿ ಸುಳ್ಳು ಸಾಕ್ಷಿ ಹೇಳಿದರು. ಪುಟ್ಟರಾಜ, ವಿಲೇಜ್ ಅಕೌಟೆಂಟರೇ ಮೊದಲಾ ದವರು "ಬದುಕಿದೆವು" ಎಂದು ಸಮಾಧಾನದಲುಸಿರುಬಿಟ್ಟರು. ಅ ಹೊತ್ತಿಗೆ ಪುಟ್ಟರಾಜನ ತಾಯಿ ಆ ಸ್ಥಳಕ್ಕೆ ಓಡಿ ಬಂ ದಳು. ಉರುಗಮ್ಮನನ್ನು ನೋಡಿ ಪುಟ್ಟರಾಜನಿಗೆನಡುಕ ಹತ್ತಿತು.

ಉರುಗಮ್ಮ ಎ.ಸಿ.ಸಾಹೇಬರ ಪಾದಗಳ ಮೇಲೆ ಬಿದ್ದು "ಅಪ್ಪಾ, ನೀನು ದೇವರಿಗೆ ಸಮ, ನನಗೆ ನರಕ ಸಿಕ್ಕಿದಂಗ ನೋಡಕಪ್ಪ; ಈ ಪಾಪಿ ಪುಟ್ಟರಾಜನ ತಾಯಿ ನಾನು, ಇವನು ಮಾಡಬಾರದ್ದನ್ನೆಲ್ಲ ಮಾಡುತ್ತಿದ್ದಾನೆ. ಇವ್ನು ಪಾಣೀಲಿ ಚಂದ್ರ ಸೆಟ್ಟಿಯೇ ಚನ್ನಮ್ಮನ ಭೂಮಿಯ ಅಬಾದು ಮಾಡ್ತಾ ಅವ್ನೆ ಅಂತ ಬರೆದಿರೋದು ಸುಳ್ಳು; ಸುಳ್ಳು, ಅಪ್ಪಟ ಸು ಳ್ಳು. ನಾನು ಬಡಕೊಂಡೆ; ಸತ್ಯ ಬರೀ ಎಂಸೆ; ಒಂದು ಮನೆ ದೀಪ ಉಳಿಸು ಎಂದೆ. ಕೇಳಲಿಲ್ಲ; ಹೆತ್ತೋಳಿಗಿಂತ ಇ ವನಿಗೆ ಸೆಟ್ರು ನೋಟಿನ ಕಂತೆಯೇ ಜಾಸ್ತಿ ಆಯ್ತು" ಎಂದು ಎದೆಯನ್ನು ಬಡೆದುಕೊಂಡು ಅತ್ತಳು. ಈ ಮಾತುಗಳನ್ನು ಕೇಳಿ ಚಂದ್ರುಸೆಟ್ಟಿ, ವಹಾಬ್, ಪುಟ್ಟರಾಜ ಅವರು ನಡುಗಿಹೋದರು. ಎ.ಸಿ.ಸಾಹೇಬರು ಸತ್ಯವೇನೆಂದು ಪುಟ್ಟರಾ ಜನನ್ನು ಪ್ರಶ್ನಿಸಿದಾಗ ತನ್ನ ತಾಯಿಗೆ ಕ್ಯಾನ್ಸರ್ ಕಾಯಿಲೆಯಿಂದ ತಲೆ ಕೆಟ್ಟಿದೆ ಎಂದು ಹೇಳಿದನು. ಉರುಗಮ್ಮ ಸು ಳ್ಳು ಹೇಳುತ್ತಿರುವ ತನ್ನ ಮಗನ ನಾಲಗೆಯಲ್ಲಿಹುಳ ಬೀಳಲೆಂದು ಶಾಪ ಹಾಕಿದಳು.

ಎ.ಸಿ. ಸಾಹೇಬರು ಉರಗಮ್ಮ ಯಾರೆಂದು ಕೇಳಿದಾಗ ಪುಟ್ಟರಾಜ ಆಕೆ ತನ್ನ ತಾಯಿಯೆಂದು ಒಪ್ಪಿಕೊಂಡನು.

ಯಾವತಾಯಿಯೂ ಮಗನಿಗೆ ಕೇಡು ಬಯಸುವುದಿಲ್ಲವೆಂದೂ, ತಾಯಿ ಪ್ರತ್ಯಕ್ಷ ದೈವವೆಂದೂ, ಅನ್ಯರಿಗೆ ಮಗನು ಅನ್ಯಾಯ ಮಾಡಿದರೆ ಮಗನಿಗೆ ಕೇಡಾಗುವುದೆಂಬ ಸಂಕಟದಿಂದ ಆಕೆ ಸತ್ಯ ಹೇಳಲೆಂದು ಆಗ್ರಹಿಸುತ್ತಿರುವಳೆ ಂದೂ ಎ.ಸಿ. ಸಾಹೇಬರು ಪುಟ್ಟರಾಜನಿಗೆ ಹೇಳಿ, ನಿಜದ ಸಂಗತಿಯನ್ನು ಧೈರ್ಯದಿಂದ ಹೇಳಬೇಕೆಂದೂ, ಸತ್ಯ ವನ್ನು ಹೇಳಿದರೆ ಯಾವ ಶಿಕ್ಷೆಯನ್ನು ಕೊಡುವುದಿಲ್ಲವೆಂದೂ ಪುಟ್ಟರಾಜನಿಗೆ ಹೇಳಿದರು. ತಾಯಿಯ ಅರಚಾಟ, ಎ.ಸಿ. ಸಾಹೇಬರ ಭರವಸೆ ಇತ್ಯಾದಿಗಳಿಂದ ಪುಟ್ಟರಾಜನ ಹೃದಯ ಮೀಟಿಹೋಯಿತು. ಅವನು "ನಮ್ಮವ್ವ ಹೇಳ್ತಾ ಇರೋದು ಸತ್ಯ ಸಾರ್" ಎಂದು ಮುಖಮುಚ್ಚಿಕೊಂಡು ಅಳಲಾರಂಭಿಸಿದನು. ಆಗ ಉರಗಮ್ಮನ ಸಂತೋಷಕ್ಕೆ ಪಾರವೇ ಇರಲಿಲ್ಲ. ಚಂದ್ರಪ್ಪ ಸೆಟ್ಟಿ, ಭೂನ್ಯಾಯ ಮಂಡಲಿ ಸದಸ್ಯರು, ತಲೆ ತಗ್ಗಿಸಿದರು. ಉರಗಮ್ಮ ಆನಂದಾ ತಿಶಯದಿಂದ ಕೊನೆಯುಸಿರನ್ನೆಳೆದಳು. ಚನ್ನಮ್ಮನಿಗೆಭೂಮಿ ದಕ್ಕಿತು; ಚಂದ್ರಯ್ಯ ಸೆಟ್ಟಿ ಹಣ-ಭೂಮಿ ಎರಡನ್ನೂ ಕಳೆದುಕೊಂಡನು. ಚನ್ನಮ್ಮನಿಗೆ ತನ್ನ ತಾಯಿಯನ್ನು ಕಳೆದುಕೊಂಡಷ್ಟೇ ದುಃಖವಾಯಿತು. ಹೀಗೆ ಉರುಗಮ್ಮ ನ್ಯಾಯ ನಿಷ್ಠುರತೆಯ ದೃಷ್ಟಿಯಿಂದ ಚನ್ನಮ್ಮ ಬದುಕಿದಳು. ಮಗನ ಹೃದಯ ಬದಲಾಯಿತು.